ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ನೇವಿ-1/ಅಉಆ/97/2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು,ದಿನಾಂಕ:04.03.2022

## ಪ್ರಕಟಣೆ

ವಿಷಯ: 2021-22ನೇ ಶೈಕ್ಷಣಿಕ ಸಾಲಿನಲ್ಲಿ 3ನೇ ಸುತ್ತಿನ ಆನ್‌ಲೈನ್ ಕೌನ್ಸಿಲಿಂಗ್ ಮೂಲಕ ಅತಿಥಿ ಉಪನ್ಯಾಸಕರ ಆಯ್ಕೆ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂ:ಇಡಿ/242/ಡಿಸಿಇ/2021, ದಿ:14.01.2022.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/ನೇವಿ-1/ಅಉಆ/97/ 2021-22, ದಿನಾಂಕ:17.01.2022.

*****

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಉಲ್ಲೇಖ-(1)ರ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ, ಗರಿಷ್ಠ 15/19 ಗಂಟೆಗಳ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳಲು ಕ್ರಮವಹಿಸಲಾಗಿದ್ದು, ಅದರಂತೆ, ಉಲ್ಲೇಖ-(2) ರ ಈ ಕಛೇರಿಯ ಸುತ್ತೋಲೆಯಲ್ಲಿ ನಿರ್ದಿಷ್ಟಪಡಿಸಿರುವಂತೆ, ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಿ, ಅಭ್ಯರ್ಥಿಗಳು ಅರ್ಜಿಯಲ್ಲಿ ಅತಿಥಿ ಉಪನ್ಯಾಸಕರಾಗಿ ಸಲ್ಲಿಸಿದ ಸೇವಾ ಅನುಭವ ಮತ್ತು ವಿದ್ಯಾರ್ಹತೆ ಸಂಬಂಧಿಸಿದಂತೆ ನೀಡಿರುವ ಮಾಹಿತಿ ಆಧರಿಸಿ, ಸಿದ್ಧಪಡಿಸಲಾಗಿದ್ದ ರಾಜ್ಯಮಟ್ಟದ ಆಯ್ಕೆಪಟ್ಟಿಯನ್ವಯ ನಡೆಸಲಾದ 2ನೇ ಸುತ್ತಿನ ಆನ್‌ಲೈನ್ ಕೌನ್ಸಿಲಿಂಗ್ ನಂತರ ಇನ್ನೂ ಉಳಿಕೆಯಾಗಿರುವ ಕಾರ್ಯಭಾರಕ್ಕೆ ದಿನಾಂಕ:05.03.2022 ರಂದು **3ನೇ ಸುತ್ತಿನ ಕೌನ್ಸಿಲಿಂಗ್** ಅನ್ನು ಆಯೋಜಿಸಲಾಗಿದೆ. ಸದರಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಈ ಕೆಳಕಂಡ ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗಿದೆ.

1) 2ನೇ ಸುತ್ತಿನ ಕೌನ್ಸಿಲಿಂಗ್‌ನಲ್ಲಿ ಕಾಲೇಜನ್ನು ಆಯ್ಕೆ ಮಾಡಿಕೊಂಡು, ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಕಾರ್ಯಭಾರ ಕೊರತೆ/ಇಲ್ಲದೆ ಹೊರಗುಳಿದಿರುವ ಅಭ್ಯರ್ಥಿಗಳು.
2) ಹೆಚ್ಚುವರಿ ಅತಿಥಿ ಉಪನ್ಯಾಸಕರ ಅವಶ್ಯಕತೆಗೆ ಅನುಸಾರವಾಗಿ 2ನೇ ಸುತ್ತಿನ ಕೌನ್ಸಿಲಿಂಗ್ ನಂತರ ಇನ್ನೂ ಬಾಕಿ ಇರುವ (Waiting List) ಅಭ್ಯರ್ಥಿಗಳು.

ರಾಜ್ಯಮಟ್ಟದ ಕ್ರೋಢೀಕೃತ ತಾತ್ಕಾಲಿಕ ಆಯ್ಕೆಪಟ್ಟಿ (Combined Selection List), ವಿಷಯವಾರು ತಾತ್ಕಾಲಿಕ Workload ಪಟ್ಟಿ ಮತ್ತು 3ನೇ ಸುತ್ತಿನ ಕೌನ್ಸಿಲಿಂಗ್ ವೇಳಾಪಟ್ಟಿಯನ್ನು ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗುವುದು.

04/03/2022

**ಮುಖ್ಯ ಆಡಳಿತಾಧಿಕಾರಿಗಳು**
**ಕಾಲೇಜು ಶಿಕ್ಷಣ ಇಲಾಖೆ**

C:\Users\Acer\Downloads\Circular 7, Guest Faculty Notice_23-02-2022.docx